ಶ್ರೀ ಟಿ. ಸಿದ್ದಲಿಂಗಯ್ಯನವರು.—ಇನ್ನು ನಾರ್ಸ್ಸಾಪುರ ದಿವೆ. ಹೊಸದುರ್ಗ, ನರಸಿಂಹರಾಜಪುರ, ಹೆರಿಯಾಪಟ್ಟಣ, ಹೊಸನಗರ, ಬಾಗೇಪಲ್ಲಿ ಮುಂತಾಗಿ.

ಶ್ರೀ ಬಿ. ಹುಚ್ಚೇಗೌಡರು.—ತುರುವೇಕೆರೆ ತಾಲ್ಲೂಕು ಹೆಡ್‌ಕ್ವಾರ್ಟರ್ಸಲ್ಲವೆ? ಅಲ್ಲಿ ವಿದ್ಯುಚ್ಛಕ್ತಿ ಇಲ್ಲ.

Sri T. SIDDALINGAIYA.—I note it. Thanks.

ಶ್ರೀ ಬಿ. ಹುಚ್ಚೇಗೌಡರು.—ಈ ವರ್ಷ ಇವುಗಳೆಲ್ಲಕ್ಕೂ ಕೊಡಲು ಸಾಧ್ಯವೆ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಇದರ ತತ್ವವನ್ನು ಆಗಲೇ ನಿವೇದನೆ ಮಾಡಿದ್ದೇನೆ. ಸರ್ಕಾರದ ಯೋಜನೆಯಿರುವುದು ಎಲ್ಲಾ ತಾಲ್ಲೂಕು ಹೆಡ್‌ಕ್ವಾರ್ಟರುಗಳಿಗೂ ಮೊದಲು ಪ್ರಿಫರೆನ್ಸ್‌ಕೊಟ್ಟು ಒದಗಿಸಬೇಕಾದುದೆಂದೂ; ಎರಡನೆಯದಾಗಿ ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ಹಳ್ಳಿಗಳಿಗೂ ಮತ್ತು ಹತ್ತಿರ ವಿರುವ ಗ್ರಾಮಗಳಿಗೂ ಮುಂಚೆ ಕೊಡಬೇಕೆಂದೂ, ಆ ಮೇಲೆ ಮಿಕ್ಕಕಡೆಗಳಿಗೆ ಹಾಕಬೇಕೆಂದೂ, ನಮ್ಮ ಉದ್ದೇಶ ವಿರುವುದು. ಹಣದ ಅಭಾವದಿಂದ ಹೆಚ್ಚು ಮುಂದುವರಿಯಲು ಸಾಧ್ಯವಾಗಿಲ್ಲ.

ಶ್ರೀ ಟಿ. ನಾಗಪ್ಪನವರು (ತರೀಕೆರೆ).—ಸಾವಿರಕ್ಕಿಂತ ಹೆಚ್ಚು ಜನ ಸಂಖ್ಯೆ ಇರುವ ಗ್ರಾಮಗಳಿಗೆ ಹಾಕುತ್ತೀರೆಂದು ಹೇಳಿದೆ. ಲಕ್ಕವಳ್ಳಿಗೆ ಈ ಸಾರಿ ಹಾಕುತ್ತೀರಾ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ನೋಟೀಸ್.

ಶ್ರೀ ಟಿ. ನಾಗಪ್ಪನವರು.—ಅಲ್ಲಿನ ಜನರಿಂದ ಅರಿಕೆಗಳು ಬಂದಿಲ್ಲವೆ?

Mr. SPEAKER.—In the last Assembly, these questions have all been answered.

Extent of Economy effected in Departments.

Q.—15. Sri S. KARIAPPA (Virupakshapura).—Will the Government be pleased to state—

The extent to which economy has been effected in various departments (figures may be given in rupees, annas and pies with corresponding reduction in hands)?

A.—Sri K. HANUMANTHAIYA (Chief Minister)—The information has already been furnished in the Budget Speech.

ಶ್ರೀ ಎಸ್. ಕರಿಯಪ್ಪನವರು.—ಹಲವಾರು ಇಲಾಖೆಗಳಲ್ಲಿ ಮಿತವ್ಯಯದ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುತ್ತಾರೆ. ಪೋಲೀಸ್ ಇಲಾಖೆಯಲ್ಲಿಯೂ ಮಿತವ್ಯಯ ಕಾರ್ಯಕ್ರಮ ಕೈಕೊಂಡಿದೆಯೆ?

ಶ್ರೀ ಕೆ. ಹನುಮಂತಯ್ಯನವರು.—ಅದನ್ನು ಪರೀಕ್ಷೆ ಮಾಡಿ ನೋಡೋಣ.

ಶ್ರೀ ಎನ್ ಕರಿಯಪ್ಪನವರು.—ಹೀಗೆ ಮಿತವ್ಯಯವನ್ನು ಆಚರಣೆಗೆ ತರುವಾಗ ಶ್ರೀ ಬಿ. ಎಸ್. ರಾಘವೇಂದ್ರರಾಯರು ಮಿತವ್ಯಯಕ್ಕೆ ಸಂಬಂಧಪಟ್ಟ ಅಧಿಕಾರಿಗಳಾಗಿ ಸಲಹೆ ಮಾಡಿರುವುದನ್ನು ಆಧಾರವಾಗಿಟ್ಟುಕೊಂಡಿದ್ದೀರಾ?

ಶ್ರೀ ಕೆ. ಹನುಮಂತಯ್ಯನವರು.—ಹಿಂದೆ ನಾನು ಕೆಲವು ಪ್ರಶ್ನೆಗಳಿಗೆ ಉತ್ತರಕೊಟ್ಟಹಾಗೆ, ಆ ವಂದಿಯನ್ನು ಬರೆದು ಬಹಳ ದಿನಗಳಾಗಿವೆ. ಈಗ ಪರಿಸ್ಥಿತಿ ಎಷ್ಟೋ ಬದಲಾವಣೆಯಾಗಿದೆ. ಆದಕಾರಣ ಈಗಿನ ಪರಿಸ್ಥಿತಿಗನುಗುಣವಾಗಿ ಮಿತವ್ಯಯಮಾಡಲಾಗುತ್ತದೆ.

ಶ್ರೀ ಕೆ. ಪುಟ್ಟಸ್ವಾಮಿಯವರು (ಶ್ರೀರಂಗಪಟ್ಟಣ).—ಈಗಿನ ಪರಿಸ್ಥಿತಿಗನುಗುಣವಾಗಿ ಸಲಹೆ ಕೊಡುವುದಕ್ಕೆ ಯಾರಾದರೂ ಅಧಿಕಾರಿಗಳನ್ನು ನೇಮಕ ಮಾಡುತ್ತೀರಾ?

ಶ್ರೀ ಕೆ. ಹನುಮಂತಯ್ಯನವರು.—ಇಲ್ಲ.

Mr. SPEAKER.—These questions were answered yesterday.

Supply of Building material to Harijans of Malagal.

Q.—18. Sri S. KARIAPPA (Virupakshapura).—Will the Government be pleased to state—

(*a*) whether it is a fact that building materials under the Depressed Class Amelioration Scheme were supplied to the Harijans of Malagal, Kanakapura Town;

(*b*) if the answer is in the affirmative, the year in which they were supplied;

(*c*) whether the buildings have been constructed?

A.—Sri K. HANUMANTHAIYA (Chief Minister).—(*a*) Yes.

(*b*) 1948.

(*c*) No.

ಶ್ರೀ ಎಸ್ ಕರಿಯಪ್ಪನವರು.—ನಿಮ್ಮ ಪಂಗಡದವರಿಗೆ ಸಾಮಾನುಗಳನ್ನೊದಗಿಸಿ ಇಷ್ಟು ವರ್ಷಗಳಾದರೂ ಅವರು ಮನೆಗಳನ್ನೇಕೆ ಕಟ್ಟಲಿಲ್ಲ?

ಶ್ರೀ ಕೆ. ಹನುಮಂತಯ್ಯನವರು.—ನಿವೇಶನಗಳನ್ನು ಪಡೆಯುವುದಕ್ಕೆ ಮೊದಲೇ ಸಾಮಾನುಗಳನ್ನು ಪಡೆದು ಈ ರೀತಿಯಾಗಿದೆಯೆಂದು ಸರ್ಕಾರದ ಗಮನಕ್ಕೆ ಬಂದಿಹೆ.

ಶ್ರೀ ಎಸ್. ಕರಿಯಪ್ಪನವರು.—ಸಾಮಾನುಗಳನ್ನು ಕೊಡುವುದಕ್ಕೆ ಮುಂಚೆ ನಿವೇಶನಗಳಿಗೆ ನ್ಯಳವಿದೆಯೇ ಎಂಬುದನ್ನು ಮೊದಲೇ ನೋಡಿಕೊಂಡು ಕೊಡಲಿಲ್ಲವೆ?

ಶ್ರೀ ಕೆ ಹನುಮಂತಯ್ಯನವರು.—ಹಾಗೆ ಮಾಡಬೇಕಾಗಿತ್ತು, ಆದರೆ ಮಾಡಲಿಲ್ಲ.

ಶ್ರೀ ಎಸ್. ಕರಿಯಪ್ಪನವರು.—ಆರೇಳು ವರ್ಷಗಳು ಒಂದೇ ಕಡೆ ಬಿದ್ದಿರುವ ಸಾಮಾನುಗಳೆಲ್ಲಾ ನರಿಯಾಗಿವೆಯೋ ಅಥವಾ ನಷ್ಟವಾಗಿವೆಯೋ?

ಶ್ರೀ ಕೆ. ಹನುಮಂತಯ್ಯನವರು.—ಹಾಗೆಯೇ ಇವೆಯೋ ಇಲ್ಲವೋ ಎಂಬುದನ್ನು ಈಗ ನೋಡಬೇಕು.

ಶ್ರೀ ಕೆ. ಎ. ಶಂಕರಗೌಡರು (ಮಂಡ್ಯ).—ನಿವೇ ಶನವೇ ಇಲ್ಲದೆ ಸುಮ್ಮನೆ ಸಾಮಾನುಗಳನ್ನು ತೆಗೆದು ಕೊಂಡಿದ್ದರೆ ಅಂಥವರ ಮೇಲೆ ಕ್ರಮ ತೆಗೆದು ಕೊಳ್ಳಲಾಗುತ್ತದೆಯೆ ?

ಶ್ರೀ ಕೆ. ಹನುಮಂತಯ್ಯನವರು.—ರುಜುವಾತಾದರೆ ತೆಗೆದುಕೊಳ್ಳುತ್ತೇವೆ.

Retrenchments and resulting hardships.

Q.—215. **Sri B. P. NAGARAJA MURTHY** (Malavalli).—

Will the Government be pleased to state :—

(*a*) the principle laid down for retrenching the Government servants :

(*b*) the total number of menials that would be affected by the policy of retrenchment ;

(*c*) the number of officials whose salary is above Rs. 100 that would be affected by the said policy ;

(*d*) the amount to be saved by retrenchment ?

A.—**Sri K. HANUMANTHAIYA** (Chief Minister).—

(*a*) The principle is to avoid superfluous or unnecessary expenditure.

(*b*) A standard scale had been fixed as regards the number of menials for each office. The Heads of Departments have been requested to furnish information regarding number retrenched according to the modified scale. Apart from the standard scale, menials have been retrenched where the work did not require their services.

(*c*) and (*d*) Information has already been furnished to the House in the Budget Speech.

ಶ್ರೀ ಬಿ. ಪಿ. ನಾಗರಾಜಮೂರ್ತಿಯವರು.—ಖರ್ಚು ಕೋತಾಮಾಡುವ ಕಾರ್ಯಕ್ರಮದಿಂದ ಅಧಿಕಾರಿಗಳಿಗಿಂತ ಹೆಚ್ಚಾಗಿ ಕೆಳದರ್ಜೆ ನೌಕರರಿಗೂ ಜನಾವರಿಗೂ ಹೆಚ್ಚು ಅನಾನುಕೂಲವಾಗುತ್ತಿದೆ ಯೆಂಬುದು ಗಮನಕ್ಕೆ ಬಂದಿದೆಯೆ ?

ಶ್ರೀ ಕೆ. ಹನುಮಂತಯ್ಯನವರು.—ಮುಖ್ಯವಾಗಿ, ಇದನ್ನು ಮಾಡುವಾಗ ಕಾರುಣ್ಯದೃಷ್ಟಿಯಿಂದ ಮಾಡುವುದಕ್ಕಾಗುವುದಿಲ್ಲ. ಎಲ್ಲಿ ಅನಾವಶ್ಯಕವಾಗಿ ನೌಕರರಿರುತ್ತಾರೋ ಅವರನ್ನೆಲ್ಲಾ ತೆಗೆದು ಹಾಕಬೇಕಾಗುತ್ತದೆ.

ಶ್ರೀ ಬಿ. ಪಿ. ನಾಗರಾಜಮೂರ್ತಿಯವರು.—ಇದರಿಂದ ಹೆಚ್ಚು ಜನರು ನಿರುದ್ಯೋಗಿಗಳಾದರೆ, ಅವರಿಗೆ ಪರಿಹಾರವೇನಾದರೂ ಕೊಡಬೇಕೆಂದು ಸರ್ಕಾರದವರು ಯೋಚನೆ ಮಾಡಿದ್ದಾರೆಯೆ ?

ಶ್ರೀ ಕೆ. ಹನುಮಂತಯ್ಯನವರು.—ಹಾಗೆ ಪರಿಹಾರ ಕೊಡುವ ನೀತಿಯನ್ನು ಅಂಗೀಕಾರ ಮಾಡುವುದಕ್ಕೆ ಸಾಧ್ಯವೆ ಎಂಬುದನ್ನು ಯೋಚನೆ ಮಾಡಬೇಕು.

ಶ್ರೀ ಬಿ. ಪಿ. ನಾಗರಾಜಮೂರ್ತಿಯವರು.—ಹೆಚ್ಚು ಉಳಿತಾಯವಾಗುವಂತೆ ಸ್ವಲ್ಪ ಅಧಿಕಾರಿಗಳನ್ನು ಕೋತಾಮಾಡುವುದು ಒಳ್ಳೆಯದಲ್ಲವೆ ?

ಶ್ರೀ ಕೆ. ಹನುಮಂತಯ್ಯನವರು.—ನ್ಪಷ್ಟವಾಗಿ ನಾನು ಹೇಳಬೇಕಾದರೆ, ಸರ್ಕಾರವೇ ಎಲ್ಲರಿಗೂ ಉದ್ಯೋಗವನ್ನು ಕಲ್ಪಿಸಿಕೊಡಬೇಕೆಂಬ ನೀತಿಯನ್ನು ಸರ್ಕಾರ ಒಪ್ಪುವುದಿಲ್ಲ.

Disposal of applications for help for construction of houses in Gundlupet Taluk.

Q.—478. **Sri SIDDIAH** *alias* **KUNNIAH** (Gundlupet-Heggaddevankote—Scheduled Castes).—

Will the Government be pleased to state :—

(*a*) the amount allotted for constructing dwelling houses in Gundlupet Taluk for the last three years ;

(*b*) the number of applications received from this taluk requesting for help for the construction of houses ;

(*c*) the number of houses constructed in each village ;

(*d*) the number of such applications pending disposal and reasons for not disposing them of as yet ?

A.—**Sri K. HANUMANTHAIYA** (Chief Minister).—

	1949-50	1950-51	1951-52
(*a*)	Rs.	Rs.	Rs.
	9,500	15,500	21,000
(*b*)	56	72	172

(*c*) 300 houses in 52 villages. Detailed information is being collected.

(*d*) Nil. Nil.
32 pending for want of funds.

ಶ್ರೀ ಎಚ್. ಕೆ. ಶಿವರುದ್ರಪ್ಪನವರು (ಗುಂಡ್ಲು ಪೇಟೆ-ಹೆಗ್ಗಡದೇವನಕೋಟೆ).—ಸ್ವಾಮಿ, (ಬ) ಪ್ರಶ್ನೆಗೆ ಉತ್ತರವಾಗಿ 49-50ರಲ್ಲಿ 56 50-51ರಲ್ಲಿ 72 ಮತ್ತು 51-52ರಲ್ಲಿ 172 ಅರ್ಜಿಗಳು ಬಂದಿವೆ ಯೆಂದು ತಿಳಿಸಲಾಗಿದೆ. ಒಬ್ಬೊಬ್ಬರಿಗೆ ಎಷ್ಟೆಷ್ಟು ಮನೆಗಳನ್ನು ಕಟ್ಟಿಸಿಕೊಳ್ಳಲು ಸಹಾಯವನ್ನು ಸರ್ಕಾರದವರು ನೀಡುತ್ತಾರೆ ?

ಶ್ರೀ ಕೆ. ಹನುಮಂತಯ್ಯನವರು.—ಒಬ್ಬೊಬ್ಬರಿಗೆ ಒಂದೊಂದು ಮನೆಯನ್ನು ಕಟ್ಟಿಕೊಳ್ಳಲು ಸಹಾಯ ನೀಡಬೇಕೆಂಬುದು ಸರ್ಕಾರದ ನೀತಿಯಾಗಿದೆ.

ಶ್ರೀ ಎಚ್. ಕೆ. ಶಿವರುದ್ರಪ್ಪನವರು.—56 ಅರ್ಜಿದಾರರಿಗೆ 300 ಮನೆಗಳನ್ನು ಕಟ್ಟಿಸಿಕೊಡಲಾಯಿ